ಜಿಲ್ಲಾ ಅಧಿಕಾರಿಗಳ ಕಾರ್ಯಾಲಯ,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಜಿಲ್ಲಾ ಪಂಚಾಯಿತಿ ಕಟ್ಟಡ, ಜ್ಯೋತಿ ನಗರ, ಚಿಕ್ಕಮಗಳೂರು–577102

E-mail- dobcmchikkamagalore@gmail.com ☎ /Fax 08262-220922

ಸಂಖ್ಯೆ: ಹಿಂವಇ/ಬಿ4/ಸಿಆರ್- 10 /2011-2012 ದಿನಾಂಕ:28.12.2011

## -: ಪ್ರಕಟಣೆ:-

***ವಿಷಯ***: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಚಿಕ್ಕಮಗಳೂರು ಜಿಲ್ಲೆಯ ಕಾರ್ಯ ಚಟುವಟಿಕೆಗಳನ್ನು ಮಾಹಿತಿ ಪಡೆಯಲು ಹಕ್ಕು ಅಧಿನಿಯಮ 2005 ಕೇಂದ್ರ ನಿಯಮಗಳು 22/2005 ರನ್ವಯ ಪ್ರಕಟಪಡಿಸುವ ಬಗ್ಗೆ.

<><><>

I. ಚಿಕ್ಕಮಗಳೂರು ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳ ಕಛೇರಿಯ ಕಡತಗಳು / ರಿಜಿಸ್ಟರುಗಳನ್ನು ಕಛೇರಿ ಕೈಪಿಡಿ ನಿಯಮಗಳನ್ವಯ ವರ್ಗೀಕರಿಸಲಾಗಿದೆ. ಇಲಾಖೆಯ ಕಾರ್ಯಕ್ರಮಗಳು ಹಾಗೂ ಇನ್ನಿತರೇ ಮಾಹಿತಿಗಳನ್ನು ಮಾಹಿತಿ ಪಡೆಯಲು ಹಕ್ಕು ಅಧಿನಿಯಮ 2005ರ ಸೆಕ್ಷನ್ 4(1) (a) ರಂತೆ ಗಣಕೀಕರಿಸಿ, ಕಾಲ ಕಾಲಕ್ಕೆ ಪರಿಷ್ಕರಿಸಿ, ಪ್ರತಿ ಆರ್ಥಿಕ ವರ್ಷದ ಮುಕ್ತಾಯದ ನಂತರ ಪರಿಷ್ಕೃತ ಮಾಹಿತಿಯನ್ನು ತಯಾರಿಸಿ, ಚಿಕ್ಕಮಗಳೂರು ಜಿಲ್ಲಾ ವೆಬ್ ಸೈಟ್‌ನಲ್ಲಿ ಅಳವಡಿಸಿ ಸಾರ್ವಜನಿಕರ ಗಮನಕ್ಕೆ ಪ್ರಚುರ ಪಡಿಸಿದೆ. ವೆಬ್‌ಸೈಟ್ ವಿಳಾಸ http://www.chikmagalur.nic.in ರಲ್ಲಿ ಅಳವಡಿಸಿರುವ ವಿವರಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.

II. ಸೆಕ್ಷನ್ 4(1)(b) ಪ್ರಕಾರ ಇಲಾಖೆಯ ಕಾರ್ಯಕ್ರಮಗಳು / ಕಾರ್ಯಸೂಚಿಗಳ ವಿವರಗಳನ್ನು ಸಾರ್ವಜನಿಕವಾಗಿ ಕೆಳಕಂಡಂತೆ ಪ್ರಚುರಪಡಿಸಲಾಗಿದೆ.

### 1) **ಸೆಕ್ಷನ್ 4(1) B(1) ಪ್ರಕಾರ ಇಲಾಖೆಯ ಸಂಘಟನೆ ಹಾಗೂ ಕರ್ತವ್ಯಗಳು:**

ರಾಜ್ಯದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಜನಾಂಗವನ್ನು ಗುರುತಿಸಿ, ಅವರ ಕ್ಷೇಮಾಭಿವೃದ್ಧಿಗಾಗಿ ಭಾರತ ಸಂವಿಧಾನ 15(4)ನೇ ಅನುಚ್ಛೇದದಂತೆ, ಶೈಕ್ಷಣಿಕ ಮತ್ತು 16(4) ನೇ ಅನುಚ್ಛೇದದಂತೆ, ಔದ್ಯೋಗಿಕ, ಮೀಸಲಾತಿ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ. ಈ ಸೌಲಭ್ಯಗಳನ್ನು ಅನುಷ್ಠಾನಗೊಳಿಸಲು ಪ್ರತ್ಯೇಕವಾದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯನ್ನು 1977 ರಲ್ಲಿ ಸೃಜಿಸಲಾಗಿರುತ್ತದೆ.

ಹಿಂದುಳಿದ ವರ್ಗಗಳ ಕಲ್ಯಾಣಾಭಿವೃದ್ಧಿಗಾಗಿ, ಕರ್ನಾಟಕ ಸರ್ಕಾರವು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಅದರಂತೆ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಇಲಾಖೆ ವತಿಯಿಂದ ಅನುಷ್ಠಾನಗೊಳ್ಳುತ್ತಿರುವ ಕಾರ್ಯಕ್ರಮಗಳು ಕೆಳಕಂಡಂತಿರುತ್ತವೆ.

1) ಕಾರ್ಯ ನಿರ್ವಾಹಕ ಸಿಬ್ಬಂದಿ/ ನಿರ್ದೇಶನ ಮತ್ತು ಆಡಳಿತ
2) ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ನಿರ್ವಹಣೆ- ಸುಧಾರಣೆ, ಪ್ರೋತ್ಸಾಹಧನ
3) ಆಶ್ರಮ ಶಾಲೆಗಳು,
4) ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು,
5) ಹೊಲಿಗೆ ತರಭೇತಿ ಕೇಂದ್ರಗಳು,
6) ಖಾಸಗಿ ವಿದ್ಯಾರ್ಥಿ ನಿಲಯಗಳಿಗೆ ಸಹಾಯಧನ
7) ಶುಲ್ಕಗಳ ರಿಯಾಯಿತಿ.
8) ಮೆಟ್ರಿಕ್ ಪೂರ್ವ / ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಮಂಜೂರಾತಿ,

9) ಪ್ರವರ್ಗ-1 ರ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಭೋಜನಾ ವೆಚ್ಚ ಮಂಜೂರಾತಿ/ ತಾಂತ್ರಿಕ ಮತ್ತು ವೃತ್ತಿಪರ ಪದವಿಯ ಪ್ರವರ್ಗ-2ಎ, 2ಬಿ, 3ಎ, 3ಬಿ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಭೋಜನಾ ವೆಚ್ಚ ಮಂಜೂರಾತಿ.

10) ಹಿಂದುಳಿದ ವರ್ಗದ ಕಾನೂನು ಪದವೀಧರರಿಗೆ ಶಿಷ್ಯವೇತನ

11) ವಿದ್ಯಾರ್ಥಿ ನಿಲಯಗಳ / ವಸತಿ ಶಾಲೆಗಳ ಕಟ್ಟಡ ನಿರ್ಮಾಣ/ ದುರಸ್ಥಿ

12) ಬೆರಳಚ್ಚು ಮತ್ತು ಶೀಘ್ರಲಿಪಿ ತರಬೇತಿ

13) ದೇವರಾಜ್ ಅರಸ್‌ರವರ ಜನ್ಮ ದಿನಾಚರಣೆ ಮತ್ತು 15 ಅಂಶಗಳ ಕಾರ್ಯಕ್ರಮದ ಮೇಲೆ ವಿಚಾರಗೋಷ್ಟಿ ಹಾಗೂ ದೇವರಾಜ್ ಅರಸ್ ಭವನ ನಿರ್ಮಾಣ.

14) ಸಮುದಾಯ ಭವನ / ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ಮಾಣಕ್ಕೆ ಸಹಾಯಧನ

15) ಅಲೆಮಾರಿ/ ಅರೆ ಅಲೆಮಾರಿ ಜನಾಂಗದವರಿಗೆ ವಿವಿಧ ಕಾರ್ಯಕ್ರಮಗಳು

16) ಗೊಲ್ಲರಹಟ್ಟಿ ಅಭಿವೃದ್ಧಿ

17) ಮಾದರಿ ವಸತಿ ನಿಲಯಗಳ ಪ್ರಾರಂಭ:

ಮುಂತಾದ ಯೋಜನೆಗಳನ್ನು ಜಿಲ್ಲೆಯಲ್ಲಿ ಅನುಷ್ಟಾನಗೊಳಿಸಲಾಗುತ್ತಿದೆ. ಈ ಕಾರ್ಯಕ್ರಮಗಳ ಅನುಷ್ಟಾನಕ್ಕಾಗಿ ಈ ಇಲಾಖೆಯ ಸಂಬಂಧಪಟ್ಟಂತೆ ಸಂಘಟನೆ ಕೆಳಕಂಡಂತಿರುತ್ತದೆ.



## 2) ಸೆಕ್ಷನ್ 4(1)(ಬಿ)(ii) ರ ಪ್ರಕಾರ ಇಲಾಖೆಯ ಅಧಿಕಾರಿಗಳ ಮತ್ತು ನೌಕರರ ಅಧಿಕಾರಿಗಳು ಮತ್ತು ಕರ್ತವ್ಯಗಳು:-

ಸಮಾಜ ಕಲ್ಯಾಣ ಸಚಿವಾಲಯದಡಿ ಕಾರ್ಯ ನಿರ್ವಹಿಸುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ರಾಜ್ಯಮಟ್ಟದ ಮುಖ್ಯಸ್ಥರಾಗಿ, ಒಬ್ಬ ಹಿರಿಯ ಭಾ.ಆ.ಸೇ. ಅಧಿಕಾರಿಗಳು ಆಯುಕ್ತ/ನಿರ್ದೇಶಕರಾಗಿರುತ್ತಾರೆ. ನಿರ್ದೇಶಕರ ಅಧೀನದಲ್ಲಿ ಇಬ್ಬರು ಜಂಟಿ ನಿರ್ದೇಶಕರು, ಮೂವರು ಉಪನಿರ್ದೇಶಕರು, ಐವರು ಸಹಾಯಕ ನಿರ್ದೇಶಕರು, ಒಬ್ಬರು ಲೆಕ್ಕಾಧಿಕಾರಿಗಳು ಹಾಗೂ ಇತರೆ ಸಿಬ್ಬಂದಿಯವರು ನಿರ್ದೇಶನಾಲಯದಲ್ಲಿ ಕೆಲಸ ನಿರ್ವಹಿಸುತ್ತಾರೆ. ನಿರ್ದೇಶಕರು(ಆಯುಕ್ತರು), ಹಾಗೂ ಇತರೆ ಅಧಿಕಾರಿ ಗಳು ರಾಜ್ಯದ ಎಲ್ಲಾ ಜಿಲ್ಲೆಗಳ ಇಲಾಖೆಯ ವಿದ್ಯಾರ್ಥಿ ನಿಲಯಗಳು, ಖಾಸಗಿ ಅನುದಾನಿತ ಸಂಸ್ಥೆಗಳು, ಘಟಕ ಕಛೇರಿಗಳು ಹಾಗೂ ವಿದ್ಯಾ ಸಂಸ್ಥೆಗಳಿಗೆ ಭೇಟಿ ನೀಡಿ ಪರಿಶೀಲಿಸಿ ಸೂಕ್ತ ಮಾರ್ಗದರ್ಶನ ಮಾಡುವರು

1987-1988 ನೇ ಸಾಲಿನಲ್ಲಿ ಜಿಲ್ಲಾ ಪರಿಷತ್ ಅಸ್ತಿತ್ವಕ್ಕೆ ಬಂದ ನಂತರ ಜಿಲ್ಲಾ ಹಂತದಲ್ಲಿ ಜಿಲ್ಲಾ ಪಂಚಾಯಿತಿ, ಆಡಳಿತ ವ್ಯಾಪ್ತಿಯಲ್ಲಿ ಈ ಇಲಾಖೆಯ ಜಿಲ್ಲಾ ಪಂಚಾಯಿತಿ ಕಾರ್ಯಕ್ರಮಗಳನ್ನು, ರಾಜ್ಯವಲಯ ಕಾರ್ಯಕ್ರಮಗಳನ್ನು ಜಿಲ್ಲಾಧಿಕಾರಿಗಳ ವ್ಯಾಪ್ತಿಯಲ್ಲಿ ಜಿಲ್ಲಾ ಹಂತದಲ್ಲಿ ಕಾರ್ಯಗತಗೊಳಿಸಲಾಗುತ್ತಿದೆ. ಜಿಲ್ಲಾ ಮಟ್ಟದ ಕಛೇರಿಯ ಮುಖ್ಯಸ್ಥರಾಗಿ ಗ್ರೂಪ್ -`ಎ` ದರ್ಜೆಯ (ಕಿರಿಯ ಶ್ರೇಣಿ) ಅಧಿಕಾರಿಗಳು, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳಾಗಿ ಕಾರ್ಯ ನಿರ್ವಹಿಸುತ್ತಾರೆ. ಈ ಜಿಲ್ಲಾ ಕಛೇರಿಗಳಲ್ಲಿ ಇವರಿಗೆ ಸಹಾಯಕರಾಗಿ ಕಛೇರಿ ಮೇಲ್ವಿಚಾರಕರು-1, ಪ್ರಥಮ ದರ್ಜೆ ಸಹಾಯಕರು-2, ದ್ವಿತೀಯ ದರ್ಜೆ ಸಹಾಯಕರು-3, ಹಾಗೂ ಓರ್ವ ಬೆರಳಚ್ಚುಗಾರರು, ವಾಹನ ಚಾಲಕರು ಮತ್ತು ಗ್ರೂಪ್ `ಡಿ` ಕಾರ್ಯ ನಿರ್ವಹಿಸುತ್ತಾರೆ. ಇಲಾಖೆಯ ಜಿಲ್ಲಾ ಪಂಚಾಯಿತಿ ಕಾರ್ಯಕ್ರಮಗಳಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳು, ಅನುಷ್ಠಾನಾಧಿಕಾರಿಗಳಾಗಿ ರುತ್ತಾರೆ. ಅಲ್ಲದೇ ಜಿಲ್ಲೆಯಲ್ಲಿರುವ ಇಲಾಖಾ ಸಂಸ್ಥೆಗಳು ಹಾಗೂ ಕಾರ್ಯ ಕ್ರಮಗಳ ಅನುಷ್ಠಾನದ ಮೇಲುಸ್ತುವಾರಿ ಪೂರ್ಣ ಜವಾಬ್ದಾರಿ ಇವರದ್ದಾಗಿರುತ್ತದೆ. ಔದ್ಯೋಗಿಕ ಮೀಸಲಾತಿಗೆ ಸಿಂಧುತ್ವ ಪ್ರಮಾಣ ಪತ್ರ ನೀಡುವ ಜಿಲ್ಲಾ ಹಂತದ ಜಾತಿ ಮತ್ತು ಆದಾಯ ಪರಿಶೀಲನಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾಗಿ ಸಹ ಕಾರ್ಯ ನಿರ್ವಹಿಸುವರು. ತಾಲ್ಲೂಕು ಮಟ್ಟದಲ್ಲಿ ಇಲಾಖೆಗೆ ಪ್ರತ್ಯೇಕ ಕಛೇರಿಗಳಿಲ್ಲದ ಪ್ರಯುಕ್ತ ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿಗಳು, ಇಲಾಖೆಯ ತಾಲ್ಲೂಕು ಪಂಚಾಯಿತಿ ಕಾರ್ಯಕ್ರಮಗಳ ಅನುಷ್ಠಾನಾಧಿಕಾರಿ ಗಳಾಗಿದ್ದು, ದಿನಾಂಕ: 28.12.2011ರಿಂದ ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿರವರು ಸದರಿ ಕೆಲಸ ನಿರ್ವಹಿಸುತ್ತಿದ್ದಾರೆ. ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿರವರು ತಾಲ್ಲೂಕು ವ್ಯಾಪ್ತಿಯಲ್ಲಿ ಅನುಷ್ಠಾನಗೊಳ್ಳುವ ಎಲ್ಲಾ ಕಾರ್ಯಕ್ರಮಗಳ ಅನುಷ್ಠಾನಾಧಿಕಾರಿಗಳಾಗಿ ಕೆಲಸ ನಿರ್ವಹಿಸುವುದರೊಂದಿಗೆ ತಾಲ್ಲೂಕು ವ್ಯಾಪ್ತಿಯ ವಿದ್ಯಾರ್ಥಿ ನಿಲಯಗಳ ತಪಾಸಣೆ, ಔದ್ಯೋಗಿಕ ಘಟಕ ಕಛೇರಿಗಳಲ್ಲಿ / ಶೈಕ್ಷಣಿಕ ಸಂಸ್ಥೆಗಳಲ್ಲಿ ಮೀಸಲಾತಿ ವಿಚಲತೆ ಬಗ್ಗೆ ಪರಿಶೀಲಿಸಿ, ವರದಿ ನೀಡಬೇಕಾಗಿರುತ್ತದೆ.

ಇಲಾಖೆ ವತಿಯಿಂದ ನಡೆಯುತ್ತಿರುವ ವಿದ್ಯಾರ್ಥಿ ನಿಲಯಗಳಲ್ಲಿ ಪ್ರತಿ ನಿಲಯಕ್ಕೆ ಓರ್ವ ನಿಲಯಪಾಲಕ/ ಮೇಲ್ವಿಚಾರಕ, 2 ಅಡಿಗೆಯವರು, ಓರ್ವ ಅಡುಗೆ ಸಹಾಯಕರು, ಬಾಲಕಿಯರ ನಿಲಯಗಳಲ್ಲಿ ಓರ್ವ ರಾತ್ರಿ ಕಾವಲು ಗಾರರು ಇರುತ್ತಾರೆ. ವಿದ್ಯಾರ್ಥಿ ನಿಲಯಗಳಲ್ಲಿರುವ ನಿಲಯಪಾಲಕರು / ಮೇಲ್ವಿಚಾರಕರು ನಿಲಯಗಳ ಪೂರ್ಣ ಉಸ್ತುವಾರಿ, ಅಡುಗೆಯವರು / ಅಡುಗೆ ಸಹಾಯಕರು ಊಟ, ತಿಂಡಿ ತಯಾರಿಸಿ ನೀಡುವುದರೊಂದಿಗೆ, ಸ್ವಚ್ಛತೆ ಕಾಪಾಡುವುದು, ರಾತ್ರಿ ಕಾವಲುಗಾರರು ರಾತ್ರಿ ವೇಳೆ ನಿಲಯಗಳಲ್ಲಿದ್ದು, ಕೆಲಸ ನಿರ್ವಹಿಸುತ್ತಾರೆ.

ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಪ್ರಾಂಶುಪಾಲರು (ಗ್ರೂಪ್ `ಬಿ` ದರ್ಜೆ) ವಸತಿ ಶಾಲೆಯ ಮುಖ್ಯಸ್ಥರಾಗಿರುತ್ತಾರೆ. ಇವರ ಅಧೀನದಲ್ಲಿ, ಶಿಕ್ಷಕರು ಹಾಗೂ ಇತರೇ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಾರೆ.

ಮೇಲ್ಕಂಡ ಕರ್ತವ್ಯಗಳಲ್ಲದೇ ರಾಜ್ಯ ಮಟ್ಟದಲ್ಲಿರುವ ಕರ್ನಾಟಕ ಹಿಂದುಳಿದ ವರ್ಗಗಳ ಶಾಶ್ವತ ಆಯೋಗ ಗಳ ಸಲಹೆ / ಸೂಚನೆಗಳನ್ನು ಜಿಲ್ಲಾ ಹಂತದಲ್ಲಿ ಜಾರಿಗೊಳಿಸಲಾಗುತ್ತದೆ.

## 3) ಸೆಕ್ಷನ್ (4)(1)(ಬಿ)(iii) ರ ಪ್ರಕಾರ ಅಧಿಕಾರಿಗಳು ಮತ್ತು ನೌಕರರು ಮತ್ತು ಅವರಿಗೆ ವಹಿಸಲಾಗಿರುವ ಅಧಿಕಾರಿಗಳು ಮತ್ತು ಕರ್ತವ್ಯಗಳು ಮತ್ತು ತೀರ್ಮಾನ ಕೈಗೊಳ್ಳುವಲ್ಲಿ ಅವರು ಅನುಸರಿಸುವ ಕಾರ್ಯ ವಿಧಾನ:-

ಜಿಲ್ಲಾ ಕಛೇರಿಯಲ್ಲಿ ಸಾರ್ವಜನಿಕರಿಂದ, ಅಧೀನ ಕಛೇರಿಗಳಿಂದ, ಮೇಲಾಧಿಕಾರಿಗಳಿಂದ ಹಾಗೂ ಸರ್ಕಾರದಿಂದ ಬರುವಂತಹ ಕಾಗದ ಪತ್ರಗಳನ್ನು ಸಾಮಾನ್ಯ ಸ್ವೀಕೃತಿಯಲ್ಲಿ ಸ್ವೀಕರಿಸಿ, ಕಛೇರಿ ಮೇಲ್ವಿಚಾರಕರು, ವಿಷಯ ನಿರ್ವಾಹಕವಾರು ಗುರುತು ಮಾಡಿ, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿರವರ ಕಿರು ಸಹಿಯ ನಂತರ ಸಂಬಂಧಪಟ್ಟ ರಿಜಿಸ್ಟರ್‌ಗಳಲ್ಲಿ ದಾಖಲಿಸಿ, ವಿಷಯ ನಿರ್ವಾಹಕರಿಗೆ ಸ್ವೀಕೃತಿ ಪಡೆದು ನೀಡಲಾಗುವುದು.

ಕಛೇರಿ ಕೈಪಿಡಿ ನಿಯಮಾವಳಿ ಪ್ರಕಾರ ವಿಷಯ ನಿರ್ವಾಹಕರು ಐದು ಕಂತೆ ವಿಧಾನ ಅಳವಡಿಸಿಕೊಂಡು ಜನ ಪ್ರತಿನಿಧಿಗಳ ಹಾಗೂ ತುರ್ತು ಕಾಗದ ಪತ್ರಗಳನ್ನು ಆದ್ಯತೆ ಮೇರೆಗೆ ಕಛೇರಿ ಟಿಪ್ಪಣಿಯನ್ನು ವಿಷಯ ನಿರ್ವಾಹಕರು ಮಂಡಿಸುತ್ತಾರೆ. ವಿಷಯ ನಿರ್ವಾಹಕರಿಂದ ಬಂದಂತಹ ಎಲ್ಲಾ ಕಡತಗಳನ್ನು ಪರಿಶೀಲನೆ ಮಾಡಿ, ಕಛೇರಿ ವ್ಯವಸ್ಥಾಪಕರು, ತೀರ್ಮಾನ ಕೈಗೊಳ್ಳುವ ನಿಟ್ಟಿನಲ್ಲಿ ಸೂಕ್ತ ಅಭಿಪ್ರಾಯದೊಂದಿಗೆ, ಜಿಲ್ಲಾ ಅಧಿಕಾರಿರವರಿಗೆ ಸಲ್ಲಿಸುತ್ತಾರೆ. ಸರ್ಕಾರದಿಂದ / ಇಲಾಖೆ ವತಿಯಿಂದ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಜಿಲ್ಲಾ ಅಧಿಕಾರಿರವರು ತೀರ್ಮಾನ ಕೈಗೊಳ್ಳುತ್ತಾರೆ. ಮತ್ತಿತರ ಮುಖ್ಯ ವಿಷಯಗಳಲ್ಲಿ ತೀರ್ಮಾನ / ಮಂಜೂರಾತಿಗಾಗಿ ಮೇಲಾಧಿಕಾರಿ ಗಳಿಗೆ / ಜಿಲ್ಲಾ ಹಂತದಲ್ಲಿ ಜಿಲ್ಲಾ ಪಂಚಾಯಿತಿ, ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿರವರಿಗೆ ಉಪಕಾರ್ಯದರ್ಶಿ (ಆ) ರ ಮೂಲಕ ಕಛೇರಿ ಟಿಪ್ಪಣಿ / ಪತ್ರ ಮೂಲಕ ಸಲ್ಲಿಸುತ್ತಾರೆ.

ತಾಲ್ಲೂಕು ಹಂತದಲ್ಲಿ ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿರವರು ಮೇಲ್ಕಂಡ ವಿಧಾನ ಅನುಸರಿಸಿ, ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿರವರ ತೀರ್ಮಾನಕ್ಕೆ ಸಲ್ಲಿಸುತ್ತಾರೆ. ಇಲಾಖೆ ಸಂಸ್ಥೆಗಳ ತನಿಖಾ ವರದಿಗಳನ್ನು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿರವರಿಗೆ ಸಲ್ಲಿಸುತ್ತಾರೆ.

## 4) ಸೆಕ್ಷನ್ 4(1)(ಬಿ)(iv) ಪ್ರಕಾರ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ರೂಢಿಸಿ ಕೊಂಡಿರುವ ಕ್ರಮಗಳು:-

(ಅ) ಕಛೇರಿಯಲ್ಲಿ ಸ್ವೀಕರಿಸಲಾಗುವ ಎಲ್ಲಾ ಕಾಗದ ಪತ್ರಗಳನ್ನು ಸಾಮಾನ್ಯ ಸ್ವೀಕೃತಿಯಲ್ಲಿ ದಾಖಲಿಸಿ, ಒಂದು ದಿವಸದೊಳಗೆ ವಿಷಯ ನಿರ್ವಾಹಕರಿಗೆ ನೀಡುವಂತಹ ವ್ಯವಸ್ಥೆ.

(ಆ) ವಿಷಯ ನಿರ್ವಾಹಕರು ಕಛೇರಿ ನಿಯಮಾವಳಿ ರೀತ್ಯಾ ಮೇಲಾಧಿಕಾರಿಗಳಿಗೆ ಕಾಗದ ಪತ್ರಗಳನ್ನು ಮಂಡಿಸುವುದು.

(ಇ) ಸಾರ್ವಜನಿಕರಿಂದ ಸ್ವೀಕರಿಸಲಾಗುವ ಕಾಗದ ಪತ್ರಗಳಿಗೆ ಸ್ವೀಕೃತಿ ನೀಡುವುದಲ್ಲದೇ ಕಾರ್ಯಗತ ವರದಿ ನಿಗದಿ ಪಡಿಸಿ ತಿಳಿಸುವುದು.

(ಈ) ಇಲಾಖೆಯ ಕಛೇರಿಗಳಿಂದ ವರದಿ ಪಡೆಯಲು / ಮೇಲಾಧಿಕಾರಿಗಳಿಗೆ ವರದಿ ಸಲ್ಲಿಸಲು ಕಾಲಾವಧಿ ನಿಗದಿ ಪಡಿಸುವುದು.

(ಉ) ಇಲಾಖೆಯ ಪ್ರಗತಿ ಪರಿಶೀಲಿಸಲು ಸಭೆಗಳನ್ನು ಏರ್ಪಡಿಸುವುದು.

## 5) ಸೆಕ್ಷನ್ 4(1)(ಬಿ)(V) ಪ್ರಕಾರ ಕಾರ್ಯ ನಿರ್ವಹಣೆಯಲ್ಲಿ ಅನುಸರಿಸುವ ಹಾಗೂ ಪಾಲನೆ ಮಾಡುವ ನೀತಿ ನಿಯಮಗಳು, ಕೈಪಿಡಿಗಳು ಹಾಗೂ ದಾಖಲೆಗಳು:-

1) ಸರ್ಕಾರದಿಂದ / ಇಲಾಖೆಯಿಂದ ಕಾಲ ಕಾಲಕ್ಕೆ ರೂಪಿಸಿರುವ ನೀತಿ ನಿಯಮಗಳು, ಆದೇಶಗಳು, ಸುತ್ತೋಲೆ ಗಳು.
2) ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿರುವುದರಿಂದ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರಡಿ ರಚಿಸಲಾದ ನಿಯಮಗಳು, ಜಿಲ್ಲಾ ಪಂಚಾಯಿತಿ ಚುನಾಯಿತ ಮಂಡಳಿ ತೆಗೆದುಕೊಳ್ಳುವ ನಿರ್ಣಯಗಳ ಮೇಲಿನ ಆದೇಶಗಳು.

**6) ಸೆಕ್ಷನ್ 4(1)(ಬಿ)(vi) ಪ್ರಕಾರ ವರ್ಗೀಕರಣ ಮಾಹಿತಿ ದಾಖಲೆಗಳ ನಿರ್ವಹಣೆ:-**

<table>
<tr><th>ಸಾರ್ವಜನಿಕ ಪ್ರಾಧಿಕಾರ</th><th>ವಿಷಯ</th><th>ಸಕ್ಷಮ ಪ್ರಾಧಿಕಾರ</th><th>ಮೇಲ್ಮನವಿ ಪ್ರಾಧಿಕಾರ</th></tr>
<tr><td rowspan="2">ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,</td><td>ಅ) ಜಿಲ್ಲೆಯಲ್ಲಿರುವ ಇಲಾಖೆಯ ನೌಕರರ ಸೇವಾ ವಿಷಯಗಳು, ನ್ಯಾಯಾಲಯದ ಪ್ರಕರಣಗಳು, ಆಡಳಿತ ಸಂಬಂಧಿ ಪ್ರಕರಣಗಳು, ಜಿಲ್ಲಾ ಪಂಚಾಯಿತಿ/ ರಾಜ್ಯವಲಯ ಕಾರ್ಯಕ್ರಮಗಳು, ಪ್ರಗತಿ ವರದಿ ಗಳು, ಸಿಸಿಎ ಪ್ರಕರಣಗಳು</td><td rowspan="2">ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಚಿಕ್ಕಮಗಳೂರು</td><td>ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು.</td></tr>
<tr><td>ಆ) ಮೀಸಲಾತಿ ಪ್ರಕರಣಗಳು</td><td>ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ.</td></tr>
<tr><td>ಆಯಾಯಾ ತಾಲ್ಲೂಕು ಪಂಚಾಯಿತಿ</td><td>ತಾಲ್ಲೂಕು ವ್ಯಾಪ್ತಿಯ ನೌಕರರ ಸೇವಾ ವಿಷಯಗಳು, ತಾಲ್ಲೂಕು ಪಂಚಾಯಿತಿ ಕಾರ್ಯಕ್ರಮಗಳು</td><td>ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳು ಆಯಾಯಾ ತಾಲ್ಲೂಕು ಪಂಚಾಯಿತಿ</td><td>ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಚಿಕ್ಕಮಗಳೂರು</td></tr>
</table>

**7) ಸೆಕ್ಷನ್-4(1)(ಬಿ)(vii) ಪ್ರಕಾರ ನೀತಿ ನಿಯಮಗಳನ್ನು ರೂಪಿಸಲು ಹಾಗೂ ಅನುಷ್ಠಾನಗೊಳಿಸಲು ಸಾರ್ವಜನಿಕ ಸಂಪರ್ಕಕ್ಕಾಗಿ ಮತ್ತು ಸಮಾಲೋಚನೆಗಾಗಿ ವ್ಯವಸ್ಥೆ:-**

1) ಜಿಲ್ಲಾ ಕಛೇರಿಯಲ್ಲಿ ಸಾರ್ವಜನಿಕ ಕುಂದು ಕೊರತೆಗಳ ನಿವಾರಣೆ ಬಗ್ಗೆ ಅಗತ್ಯ ಮಾಹಿತಿಗಳನ್ನು ನೀಡಲಾಗುತ್ತದೆ. ಹಾಗೂ ಸೂಕ್ತ ಹಿಂಬರಹಗಳನ್ನು ಸಹ ಅರ್ಜಿದಾರರಿಗೆ ತಿಳಿಸಲಾಗುತ್ತದೆ.
2) ಮಾಹಿತಿ ಪಡೆಯಲು ಹಕ್ಕು ಅಧಿನಿಯಮ 2005 ರಂತೆ ಜಿಲ್ಲಾ ಕಛೇರಿಯಲ್ಲಿ ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಕಛೇರಿ ರವರು ಸಾರ್ವಜನಿಕ ಸಂಪರ್ಕಾಧಿಕಾರಿ / ತಾಲ್ಲೂಕು ಹಂತದಲ್ಲಿ ಆಯಾಯಾ ತಾಲ್ಲೂಕು ಪಂಚಾಯಿತಿಯಲ್ಲಿರುವ ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿರವರು ಸಹಾಯಕ ಸಾರ್ವಜನಿಕ ಸಂಪರ್ಕಾಧಿಕಾರಿ ಎಂದು ನೇಮಿಸಿ, ನಿಯಮಾವಳಿ ರೀತ್ಯಾ ಕಾರ್ಯ ನಿರ್ವಹಿಸಲು ಸೂಚಿಸಲಾಗಿದೆ.

**8) ಸೆಕ್ಷನ್ -4(1)(ಬಿ)(viii)ಪ್ರಕಾರ ಜಿಲ್ಲಾ ಕಛೇರಿ ಅಂಗ ಸಂಸ್ಥೆಗಾಗಿ ಅಥವಾ ಸಲಹೆಗಾಗಿ ರಚಿಸಿದ ಎರಡು ಅಥವಾ ಹೆಚ್ಚಿನ ಸದಸ್ಯರಿರುವ ಮಂಡಳಿ, ಪರಿಷತ್, ಸಮಿತಿಗಳು ಮತ್ತು ಇತರೆ ಸಂಸ್ಥೆಗಳ ಬಗ್ಗೆ ಇರುವ ವಿವರ ಮತ್ತು ಅವುಗಳ ನಡೆಸುವ ಸಭೆಗೆ ಸಾರ್ವಜನಿಕರಿಗೆ ಮುಕ್ತಾವಕಾಶ ಅಥವಾ ಸಭಾ ನಡುವಳಿಗಳ ಲಭ್ಯತೆ ಬಗ್ಗೆ ಇರುವ ವ್ಯವಸ್ಥೆ:**

ಇಲಾಖೆ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ವಿವಿಧ ಸಮಿತಿಗಳಿವೆ. ಈ ಸಮಿತಿಗಳಲ್ಲಿ ಚುನಾಯಿತ / ನಾಮನಿರ್ದೇಶನ ಸದಸ್ಯರುಗಳಿರುತ್ತಾರೆ. ಈ ಸಮಿತಿ ಸಭೆಗಳಿಗೆ ಸಾರ್ವಜನಿಕರಿಗೆ ಭಾಗವಹಿಸಲು ಮುಕ್ತ ಅವಕಾಶ ಗಳಿರುವುದಿಲ್ಲ. ಈ ಸಭೆಗಳ ಸಭಾ ನಡುವಳಿಗಳನ್ನು ಸಾರ್ವಜನಿಕರಿಗೆ ಕೋರಿಕೆ ಮೇರೆಗೆ ನೀಡಬಹುದಾಗಿದೆ. ಸಮಿತಿಗಳ ವಿವರಗಳನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ.

**9) ಸೆಕ್ಷನ್-4(1)(ಬಿ)(ix) ರ ಪ್ರಕಾರ ಅಧಿಕಾರಿಗಳ ಮತ್ತು ನೌಕರರ ವಿವರಗಳು**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ವ್ಯಾಪ್ತಿಯ ಅಧಿಕಾರಿಗಳ ಮತ್ತು ನೌಕರರ ವಿವರಗಳು ಇಂತಿವೆ.

(ದಿನಾಂಕ: 28.12.2011ಕ್ಕೆ)

| ಕ್ರ. ಸಂ | ಪದನಾಮ | ಮಂಜೂರಾದ ಹುದ್ದೆಗಳ ಸಂಖ್ಯೆ | ಭರ್ತಿಯಾದ ಹುದ್ದೆಗಳ ಸಂಖ್ಯೆ |
|---|---|---|---|
| 1 | ಜಿಲ್ಲಾ ಬಿಸಿಎಂ ಅಧಿಕಾರಿಗಳು | 1 | 1 |
| 2 | ಕಛೇರಿ ವ್ಯವಸ್ಥಾಪಕರು | 1 | 1 |
| 3 | ಪ್ರಥಮ ದರ್ಜೆ ಸಹಾಯಕರು | 2 | 2 |
| 4 | ದ್ವಿತೀಯ ದರ್ಜೆ ಸಹಾಯಕರು | 3 | 2 |
| 5 | ಬೆರಳಚ್ಚುಗಾರರು | 1 | 1 |
| 6 | ವಾಹನ ಚಾಲಕರು | 1 | 1 |
| 7 | ಕಛೇರಿ ಗ್ರೂಪ್ `ಡಿ` ನೌಕರ | 1 | 1 |
| | ಒಟ್ಟು | 10 | 9 |

**10) ಸೆಕ್ಷನ್-4(1)(ಬಿ)(x) ಪ್ರಕಾರ ಪಡೆಯುವ ಪರಿಹಾರ ವ್ಯವಸ್ಥೆಯು ಸೇರಿದಂತೆ ಪ್ರತಿ ಅಧಿಕಾರಿ / ನೌಕರರು ಮಾಹೆಯಾನ ಪಡೆಯುವ ವೇತನ ವಿವರ:**

ದಿನಾಂಕ: 28.12.2011 ರಲ್ಲಿ ಇದ್ದಂತೆ ಜಿಲ್ಲಾ ಕಛೇರಿ ವ್ಯಾಪ್ತಿಯಲ್ಲಿ ವೇತನ ಪಡೆಯುತ್ತಿರುವ ಅಧಿಕಾರಿಗಳ / ನೌಕರರ ವೇತನ

| ಕ್ರ. ಸಂ | ಅಧಿಕಾರಿ / ನೌಕರರ ಹೆಸರು ಶ್ರೀಯು/ಶ್ರೀಮತಿ | ಪದನಾಮ | ವೇತನ (Gross) |
|---|---|---|---|
| 1 | 2 | 3 | 4 |
| **2225-00-103-0-39 ಕಛೇರಿ ಸಿಬ್ಬಂದಿಗಳು** | | | |
| 1 | ಡಾ॥ಸಿ.ಕೆ.ಜಗದೀಶ್ ಕುಮಾರ್, | ಜಿಲ್ಲಾ ಅಧಿಕಾರಿಗಳು | 31120 |
| 2 | ಮೊಹಮದ್ ಸಿಯಾರ್ | ಕಛೇರಿ ಮೇಲ್ವಿಚಾರಕರು | 27503 |
| 3 | ಕೃಷ್ಣಮೂರ್ತಿ ವಿ.ಪಿ. | ಪ್ರಥಮ ದರ್ಜೆ ಸಹಾಯಕರು | 22223 |
| 4 | ದೀಪಕ್ ಎ.ಎಸ್. | ಪ್ರಥಮ ದರ್ಜೆ ಸಹಾಯಕರು | 19014 |
| 5 | ಪ್ರತೀಪ್ ಎಸ್.ಕೆ. | ದ್ವಿತೀಯ ದರ್ಜೆ ಸಹಾಯಕರು | 14200 |
| 6 | ರುಕ್ಮಿಣಿ ಹೆಚ್.ಎಸ್. | ದ್ವಿತೀಯ ದರ್ಜೆ ಸಹಾಯಕರು | 16388 |
| 7 | ಎಂ.ಎಂ.ಚಂದ್ರಯ್ಯ, | ವಾಹನ ಚಾಲಕರು | 19429 |
| 8 | ಹೆಚ್.ಎಂ.ರಮೇಶ್ | ಜವಾನರು | 12457 |
| 9 | ನುಸರತ್ ಆಲಿ | ಬೆರಳಚ್ಚುಗಾರರು | 15739 |

ತಾಲ್ಲೂಕು ಹಂತದ ಸಿಬ್ಬಂದಿಯ ವಿವರಗಳು ಆಯಾಯಾ ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿ (ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳು) ರವರಲ್ಲಿದೆ.

**11) ಸೆಕ್ಷನ್ 4(1)(ಬಿ)(xi) ರ ಪ್ರಕಾರ ಪ್ರತಿಯೊಂದು ಸಂಸ್ಥೆಗೂ ಅನುದಾನ ಹಂಚಿಕೆ ಎಲ್ಲಾ ಯೋಜನೆಗಳ ವಿವರ ಗಳು : ಮತ್ತು ಪ್ರಸ್ತಾಪಿತ ಖರ್ಚು ಮತ್ತು ಬಿಡುಗಡೆಯಾದ ವಿವರ (ಲಕ್ಷ ರೂ.ಗಳಲ್ಲಿ)**

| ಕ್ರ. ಸಂ. | ಕಾರ್ಯಕ್ರಮದ ವಿವರ (ಲೆಕ್ಕಶೀರ್ಷಿಕೆಯೊಂದಿಗೆ) | 2011-2012 ನೇ ಸಾಲಿಗೆ ಒದಗಿಸಿರುವ ಆಯವ್ಯಯ | | 30.11.2011ಕ್ಕೆ ಅನ್ವಯಿಸುವಂತೆ | | | |
|---|---|---|---|---|---|---|---|
| | | | | ಸರ್ಕಾರದಿಂದ ಜಿಲ್ಲಾ ಪಂಚಾಯಿತಿನಿಂದ ಬಿಡುಗಡೆ | | ಖರ್ಚಾದ ಅನುದಾನ | |
| | | ವೇತನ | ವೇತನೇತರ | ವೇತನ | ವೇತನೇತರ | ವೇತನ | ವೇತನೇತರ |
| 1 | 2 | 3 | 4 | 5 | 6 | 7 | 8 |
| | **ಜಿಲ್ಲಾ ವಲಯ ಯೋಜನೆ -ಜಿಲ್ಲಾ ಪಂಚಾಯಿತಿ ಕಾರ್ಯಕ್ರಮಗಳು** | | | | | | |
| 1 | 2225-00-103-0-26 ವಿದ್ಯಾರ್ಥಿ ನಿಲಯಗಳ ನಿರ್ವಹಣೆ | 44.61 | 351.29 | 33.48 | 248.45 | 33.39 | 214.06 |
| 2 | 2225-00-103-0-53 ಹೊಲಿಗೆ ತರಭೇತಿ ಕೇಂದ್ರಗಳ ನಿರ್ವಹಣೆ ಮತ್ತು ಹೊಸ ಕೇಂದ್ರಗಳ ಪ್ರಾರಂಭ | - | 4.00 | - | 2.99 | - | 1.39 |
| 3 | 2225-03-277-2-93 ವಕೀಲರಿಗೆ ಸ್ಟೈಫೆಂಡ್ | ಲಿಂಕ್ ಡಾಕ್ಯುಮೆಂಟ್‌ನಲ್ಲಿ ಬಜೆಟ್ ನಿಗಧಿಯಾಗಿಲ್ಲ | | | | | |
| 4 | 2225-00-103-0-40ಕಟ್ಟಡಗಳ ವೆಚ್ಚ ಮತ್ತು ನಿರ್ವಹಣೆ | - | 35.00 | - | 26.25 | | 14.57 |
| | ಒಟ್ಟು ಜಿಲ್ಲಾ ಪಂಚಾಯಿತಿ ಕಾರ್ಯಕ್ರಮಗಳು | 44.61 | 390.29 | 33.48 | 277.69 | 33.39 | 230.02 |
| | **ಜಿಲ್ಲಾ ವಲಯ ಯೋಜನೆ-ತಾಲ್ಲೂಕು ಪಂಚಾಯಿತಿ ಕಾರ್ಯಕ್ರಮಗಳು** | | | | | | |
| 5 | 2225-00-103-0-74 ಹಿಂದುಳಿದ ವರ್ಗಗಳ ತಾಲ್ಲೂಕು ವಿಸ್ತರಣಾ ಕಛೇರಿಗಳು | 6.29 | 5.71 | 5.00 | 4.28 | 4.827 | - |
| 6 | 2225-00-103-0-66 ಹಿಂದುಳಿದ ವರ್ಗಗಳ ವಿದ್ಯಾರ್ಥಿ ಗಳಿಗೆ ವಿದ್ಯಾರ್ಥಿ ವೇತನ | - | 15.00 | - | 11.25 | - | 10.91 |
| 7 | 2225-00-103-0-76 ಹೆಚ್ಚಿನ ಊಟ ವಸತಿ ಶುಲ್ಕಗಳ ಸಂದಾಯ | - | 5.00 | - | 3.75 | - | 1.325 |
| 8 | 2225-00-103-0-72ಮೆಟ್ರಿಕ್ ಪೂರ್ವ / ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ಸುಧಾರಣೆ | - | 10.00 | - | 7.50 | - | 1.40 |
| | **ಒಟ್ಟು ತಾಲ್ಲೂಕು ಪಂಚಾಯಿತಿ ಕಾರ್ಯಕ್ರಮಗಳು** | **6.29** | **35.71** | **5.00** | **26.78** | **4.83** | **13.64** |
| | **ಒಟ್ಟು** | **50.90** | **426.00** | **38.48** | **304.47** | **38.22** | **243.66** |
| | **ಜಿಲ್ಲಾ ವಲಯ ಯೋಜನೇತರ -ಜಿಲ್ಲಾ ಪಂಚಾಯಿತಿ ಕಾರ್ಯಕ್ರಮಗಳು** | | | | | | |
| 1 | 2225-00-103-0-39 ಕಾರ್ಯನಿರ್ವಾಹಕ ಸಿಬ್ಬಂದಿ | 20.15 | 2.78 | 15.10 | 2.09 | 14.620 | 1.89 |

| | | | | | | | |
|---|---|---|---|---|---|---|---|
| 2 | 2225-00-103-0-41<br>ಆಶ್ರಮ ಶಾಲೆಗಳು | 4.67 | 5.48 | 3.54 | 4.09 | 3.40 | 1.250 |
| 3 | 2225-00-103-0-28<br>ಶುಲ್ಕಗಳ ರಿಯಾಯಿತಿ | - | 56.00 | - | 42.00 | - | - |
| 4 | 2225-00-103-0-26<br>ವಿದ್ಯಾರ್ಥಿ ನಿಲಯಗಳ ನಿರ್ವಹಣೆ | 259.28 | 360.00 | 194.44 | 270.00 | 194.00 | 223.33 |
| 5 | 2225-00-103-0-56 ದೇವರಾಜ್ ಅರಸ್ ರವರ ಜನ್ಮ ದಿನಾಚರಣೆ ಮತ್ತು 15 ಅಂಶಗಳ ಕಾರ್ಯಕ್ರಮದ ಮೇಲೆ ವಿಚಾರ ಗೋಷ್ಠಿ | - | 0.18 | - | 0.135 | - | - |
| | ಒಟ್ಟು ಜಿಲ್ಲಾ ಪಂಚಾಯಿತಿ ಕಾರ್ಯಕ್ರಮಗಳು | 284.10 | 424.44 | 213.08 | 318.32 | 212.02 | 226.47 |
| | **ಜಿಲ್ಲಾ ವಲಯ ಯೋಜನೇತರ- ತಾಲ್ಲೂಕು ಪಂಚಾಯಿತಿ ಕಾರ್ಯಕ್ರಮಗಳು** | | | | | | |
| 6 | 2225-00-103-0-74 ಹಿಂದುಳಿದ ವರ್ಗಗಳ ತಾಲ್ಲೂಕು ವಿಸ್ತರಣಾ ಕಛೇರಿಗಳು | 12.25 | 1.18 | 9.187 | 0.885 | 8.11 | 0.0094 |
| 7 | 2225-00-103-0-78<br>ಹೊಲಿಗೆ ತರಭೇತಿ ಕೇಂದ್ರಗಳು | - | 2.26 | - | 1.695 | - | 1.14 |
| 8 | 2225-00-103-0-79<br>ವಿದ್ಯಾರ್ಥಿನಿಲಯ ದಲ್ಲಿರುವವರಿಗೆ ಪ್ರೋತ್ಸಾಹಕಗಳು | - | 1.58 | - | 1.185 | - | 0.784 |
| 9 | 2225-00-103-0-66 ಹಿಂದುಳಿದ ವರ್ಗಳ ವಿದ್ಯಾರ್ಥಿ ಗಳಿಗೆ ವಿದ್ಯಾರ್ಥಿ ವೇತನ | - | 37.25 | - | 27.93 | - | 12.185 |
| 10 | 2225-00-103-0-72ಮೆಟ್ರಿಕ್ ಪೂರ್ವ / ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ಸುಧಾರಣೆ | - | 1.01 | - | 0.757 | - | - |
| | ಒಟ್ಟು ತಾಲ್ಲೂಕು ಪಂಚಾಯಿತಿ ಕಾರ್ಯಕ್ರಮಗಳು | 12.25 | 43.28 | 9.19 | 32.45 | 8.11 | 14.12 |
| | ಒಟ್ಟು | 296.35 | 467.72 | 222.27 | 350.77 | 220.13 | 240.59 |
| | **ರಾಜ್ಯವಲಯ ಯೋಜನೆ** | | | | | | |
| 1 | 2225-03-277-2-57 ನರ್ಸಿಂಗ್ ತರಭೇತಿ ಭತ್ಯೆ | - | - | - | 0.480 | - | - |
| 2 | 2225-03-277-2-37 ಕೌಶಲ್ಯ ತರಭೇತಿ ಕಾರ್ಯಕ್ರಮ | - | - | - | - | - | - |
| 3 | 2225-03-800-0-12 ಅಲೆಮಾರಿ ಅರೆ ಅಲೆಮಾರಿ ಜನಾಂಗದ ಅ)ಮೆ.ಪೂ.ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ | - | - | - | 1.400 | - | - |

| | | | | | | | |
|---|---|---|---|---|---|---|---|
| | ಆ)ಮೆ.ನಂ.ವಿದ್ಯಾರ್ಥಿಗಳಿಗೆ ಅರ್ಹತಾ ವಿದ್ಯಾರ್ಥಿ ವೇತನ | - | - | - | 1.700 | - | - |
| | ಇ)ಪ್ರತಿಷ್ಠಿತ ಶಾಲೆಗಳಿಗೆ ಪ್ರತಿಭಾ ವಂತ ವಿದ್ಯಾರ್ಥಿಗಳ ಸೇರ್ಪಡೆ | - | - | - | | - | |
| | ಈ) ಅಲೆಮಾರಿ ಅರೆ ಅಲೆಮಾರಿ ಆಶ್ರಮಶಾಲೆ, ಬೀರೂರು | - | - | - | 3.00 | - | 1.98 |
| 4 | 2225-03-800-0-19 ಮಾದರಿ ವಿದ್ಯಾರ್ಥಿ ನಿಲಯ | - | - | - | 6.93 | - | 5.054 |
| 5 | 2225-03-001-0-05 ಸಮುದಾಯ ಭವನ ನಿರ್ಮಾಣ | - | - | - | - | - | - |
| 6 | 2225-03-001-0-05 ಗೊಲ್ಲರಹಟ್ಟಿ ಗಳಲ್ಲಿ ಮಹಿಳಾ ಭವನಗಳ ನಿರ್ಮಾಣ | - | - | - | - | - | - |
| 6 | ಕೇಂದ್ರ ಪುರಸ್ಕೃತ ಅ)2225-03-277-2-52ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ | - | 2.16 | - | 1.080 | - | 0.24 |
| | ಆ) 2225-03-277-2-51ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ | - | 33.11 | - | 10.800 | - | 2.25 |
| ಒಟ್ಟು ತಾಲ್ಲೂಕು ಪಂಚಾಯಿತಿ ಕಾರ್ಯಕ್ರಮಗಳು | | 0.00 | 35.27 | 0.00 | 21.81 | 0.00 | 9.52 |

**12) ಸೆಕ್ಷನ್ 4(1)(ಬಿ) (xii) ಪ್ರಕಾರ ಸಹಾಯಧನ ಕಾರ್ಯಕ್ರಮಗಳ ಅನುಷ್ಠಾನ ಹಾಗೂ ಅವುಗಳಿಗಾಗಿ ನಿಗದಿ ಗೊಳಿಸಿದ ಅನುದಾನ ಮತ್ತು ಫಲಾನುಭವಿಗಳ ವಿವರ:**

ಸ್ವಯಂ ಸೇವಾ ಸಂಸ್ಥೆಗಳು ನಡೆಸುತ್ತಿರುವ ಖಾಸಗಿ ಮೆಟ್ರಿಕ್ ಪೂರ್ವ / ಮೆಟ್ರಿಕ್ ನಂತರದ ನಿಲಯಗಳಿಗೆ ಪ್ರೋತ್ಸಾಹ ನೀಡುವ ದೃಷ್ಟಿಯಿಂದ ಮಾನ್ಯತೆ ಪಡೆದಿರುವ ಖಾಸಗಿ ವಿದ್ಯಾರ್ಥಿ ನಿಲಯಗಳ ಪ್ರತಿ ವಿದ್ಯಾರ್ಥಿಗೆ ಪ್ರತಿ ಮಾಹೆ ರೂ. 500 ರ ದರದಲ್ಲಿ ವಾರ್ಷಿಕ 10 ತಿಂಗಳಿಗೆ ಭೋಜನಾ ವೆಚ್ಚ ಸಹಾಯಧನ ನೀಡಲಾಗುವುದು. ವಿವರ ಕೆಳಕಂಡಂತಿದೆ.

| ಕ್ರ. ಸಂ. | ಖಾಸಗಿ ವಿದ್ಯಾರ್ಥಿ ನಿಲಯದ ಸ್ಥಳ ಮತ್ತು ತಾಲ್ಲೂಕು | ಬಾಲಕರ/ ಬಾಲಿಕಾ | ಮಂಜೂರಾತಿ ಸಂಖ್ಯೆ |
|---|---|---|---|
| 1 | ಶ್ರೀ ತರಳಬಾಳು ಜಗದ್ಗುರು ಸಾರ್ವಜನಿಕ ಬಾಲಕರ ವಿದ್ಯಾರ್ಥಿ ನಿಲಯ, ನಿಡಘಟ್ಟ, ಕಡೂರು ತಾಲ್ಲೂಕು. | ಬಾಲಕರ | 43 ನಿಲಯ ಪ್ರಾರಂಭಿಸಿಲ್ಲ |
| 2 | ಬಾಬುನರೇಂದ್ರ ಸಾರ್ವಜನಿಕ ಬಾಲಕರ ವಿದ್ಯಾರ್ಥಿ ನಿಲಯ, ಬಿಸಲೇಹಳ್ಳಿ,ಚಿಕ್ಕಮಗಳೂರು ತಾಲ್ಲೂಕು. | ಬಾಲಕರ | 54 ನಿಲಯ ಪ್ರಾರಂಭಿಸಿಲ್ಲ |
| 3 | S.T.J.ಬಾಲಕರ ವಿದ್ಯಾರ್ಥಿ ನಿಲಯ, ಬೀರೂರು, ಕಡೂರು ತಾಲ್ಲೂಕು. | ಬಾಲಕರ | 41 |
| 4 | ಶ್ರೀ ಅಕ್ಕಮಹಾದೇವಿ ಬಾಲಿಕಾ ನಿಲಯ, ಬೀರೂರು, ಕಡೂರು ತಾಲ್ಲೂಕು | ಬಾಲಿಕಾ | 70 |
| 5 | ಕುರುಬರ ಸಂಘ ಸಾರ್ವಜನಿಕ ಬಾಲಕರ ವಿದ್ಯಾರ್ಥಿ ನಿಲಯ, ಬೀರೂರು, ಕಡೂರು ತಾಲ್ಲೂಕು | ಬಾಲಕರ | 50 |
| 6 | ಗೌರಮ್ಮ ಸ್ಮಾರಕ ಸಾರ್ವಜನಿಕ ಬಾಲಕರ ವಿದ್ಯಾರ್ಥಿ ನಿಲಯ, ಕಡೂರು. | ಬಾಲಕರ | 25 |
| 7 | ಕಲ್ಮುರುಡೇಶ್ವರ ಸಾರ್ವಜನಿಕ ಬಾಲಕರ ವಿದ್ಯಾರ್ಥಿ ನಿಲಯ, ಸರಸ್ವತಿಪುರ, ಕಡೂರು ತಾಲ್ಲೂಕು. | ಬಾಲಕರ | 50 |
| 8 | ಶ್ರೀ ಮಲ್ಲಿಕಾರ್ಜುನ ಸ್ವಾಮಿ ಸಾರ್ವಜನಿಕ ಬಾಲಕರ ವಿದ್ಯಾರ್ಥಿ ನಿಲಯ, ಹೇಮಗಿರಿ, ಕಡೂರು ತಾಲ್ಲೂಕು. | ಬಾಲಕರ | 80 |

| | | | |
|---|---|---|---|
| 9 | ಶ್ರೀ ಬಸವರಾಜ ದೇಶೀಕೇಂದ್ರ ಸಾರ್ವಜನಿಕ ಬಾಲಕರ ವಿದ್ಯಾರ್ಥಿ ನಿಲಯ, ಮರ್ಲೆ, ಚಿಕ್ಕಮಗಳೂರು ತಾಲ್ಲೂಕು. | ಬಾಲಕರ | 35 |
| 10 | ಶ್ರೀ ಜಗದ್ಗುರು ರಂಭಾಪುರಿ ಶಿವಾನಂದಸ್ವಾಮಿ ಬಾಲಕರ ವಿದ್ಯಾರ್ಥಿ ನಿಲಯ, ಬಾಳೆಹೊನ್ನೂರು, ನರಸಿಂಹರಾಜಪುರ ತಾಲ್ಲೂಕು. | ಬಾಲಕರ | 200 |
| 11 | ಕಸ್ತೂರಿ ಬಾ ಬಾಲಿಕಾ ವಿದ್ಯಾರ್ಥಿ ನಿಲಯ, ಸಖರಾಯಪಟ್ಟಣ, ಕಡೂರು ತಾಲ್ಲೂಕು. | ಬಾಲಿಕಾ | 50 |
| 12 | ಸರ್ವೋದಯ ಶಿಕ್ಷಣ ಸಂಸ್ಥೆ: ಸೆಂಟ್ರಲ್ ಮೆಟ್ರಿಕ್ ನಂತರದ ಖಾಸಗಿ ಬಾಲಕರ ವಿದ್ಯಾರ್ಥಿ ನಿಲಯ, ಚಿಕ್ಕಮಗಳೂರು | ಬಾಲಕರ | 40 ನಿಲಯ ಪ್ರಾರಂಭಿಸಿಲ್ಲ |

**13) ಸೆಕ್ಷನ್ 4(1)(ಬಿ)(xiii) ಪ್ರಕಾರ ಸ್ವೀಕೃತವಾದ ರಿಯಾಯಿತಿಗಳು ಪರವಾನಗಿಗಳು, ಅಥವಾ ಮಂಜೂರು ಮಾಡುವ ಅಧಿಕಾರ ಪ್ರತ್ಯಯಗಳು:**

ಪ್ರತ್ಯೇಕವಾದ ರಿಯಾಯಿತಿ/ ಪರವಾನಗಿಗಳಿರುವುದಿಲ್ಲ. ಸರ್ಕಾರದ ನೀತಿ ನಿಯಮಗಳಡಿಯಲ್ಲಿ ನಿಗದಿತ ಮಿತಿಯನುಸಾರ ಮಂಜೂರು ಮಾಡುವ ಪ್ರತ್ಯಾಧಿಕಾರವಿದೆ.

**14) ಸೆಕ್ಷನ್ 4(1)(ಬಿ)(xiv) ಪ್ರಕಾರ ಲಭ್ಯವಿರುವ ಅಥವಾ ಹೊಂದಿರುವ ಮಾಹಿತಿ ಗಳನ್ನು ವಿದ್ಯುನ್ಮಾನಕ್ಕೆ ಅಳವಡಿಸಿರುವ ವಿವರಗಳು:**

ಇಲಾಖೆ ವತಿಯಿಂದ ಜಿಲ್ಲೆಯಲ್ಲಿ ಕಾರ್ಯಗತಗೊಳಿಸುತ್ತಿರುವ ಕಾರ್ಯಕ್ರಮಗಳ ವಿವರಗಳನ್ನು ವೆಬ್‌ಸೈಟ್‌ನಲ್ಲಿ ಅಳವಡಿಸಿ ಸಾರ್ವಜನಿಕರಿಗೆ ಲಭ್ಯವಾಗುವಂತೆ, ಮಾಡಲಾಗಿದೆ.

ಇಲಾಖೆ ಕಾರ್ಯಕ್ರಮಗಳ ಪ್ರಗತಿ/ಇತರೇ ಅಂಕಿ ಅಂಶಗಳನ್ನು ಕಂಪ್ಯೂಟರ್‌ನಲ್ಲಿ ದಾಖಲಿಸಲಾಗಿದೆ.

**15) ಸೆಕ್ಷನ್ 4(1)(ಬಿ)(xv) ಪ್ರಕಾರ ಸಾರ್ವಜನಿಕರ ಉಪಯೋಗಕ್ಕಾಗಿ ಹಾಗೂ ಮಾಹಿತಿ ಪಡೆಯಲು ಲಭ್ಯ ವಿವರ ವಾಚನಾಲಯಗಳು ಮತ್ತು ಗ್ರಂಥಾಲಯ ಗಳು ಮತ್ತು ಅವುಗಳ ಕೆಲಸದ ವೇಳೆ ವಿವರ**

ಪ್ರತ್ಯೇಕ ವಾಚನಾಲಯ / ಗ್ರಂಥಾಲಯಗಳಿರುವುದಿಲ್ಲ, ಇಲಾಖೆ ಸಂಬಂಧಿಸಿದ ಕಾರ್ಯಕ್ರಮಗಳ ಸಂಕ್ಷಿಪ್ತ ವಿವರಣೆ ನಿರ್ದೇಶನಾಲಯದಿಂದ ಹೊರಡಿಸಿರುವ ``ವಿಕಾಸ`` ಪುಸ್ತಕದಲ್ಲಿ ಲಭ್ಯವಿದೆ.

**16) ಸೆಕ್ಷನ್ 4(1)(ಬಿ)(xvi) ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು ಪದನಾಮ ಹಾಗೂ ಇತರೆ ವಿವರಗಳು**

| ಕ್ರ. ಸಂ | ವಿಭಾಗ | ಸಾರ್ವಜನಿಕ ಮಾಹಿತಿ ಅಧಿಕಾರಿ ಗಳು | ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳು |
|---|---|---|---|
| 1 | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿಗಳ ಕಛೇರಿ | ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಕಛೇರಿ, ಚಿಕ್ಕಮಗಳೂರು. | ಕಛೇರಿ ಮೇಲ್ವಿಚಾರಕರು, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಕಛೇರಿ, ಚಿಕ್ಕಮಗಳೂರು |
| 2 | ಹಿಂದುಳಿದ ವರ್ಗಗಳ ಕಲ್ಯಾಣ ಶಾಖೆಗೆ ಸಂಬಂಧಿಸಿದಂತೆ, ತಾಲ್ಲೂಕು ಹಂತದಲ್ಲಿ | ಆಯಾಯಾ ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿ ಗಳು | |

**ಸೆಕ್ಷನ್ 4(1)(ಬಿ)(xvii)ರ ಪ್ರಕಾರ ಇಲಾಖೆ ಮಾಹಿತಿ ಪರಿಷ್ಕರಣೆ:-**

ಆರ್ಥಿಕ ವರ್ಷ ಮುಕ್ತಾಯದ ನಂತರ ಪ್ರತಿ ಏಪ್ರಿಲ್ ಮಾಹೆಯಲ್ಲಿ ಮೇಲ್ಕಂಡ ಮಾಹಿತಿಯನ್ನು ಪರಿಷ್ಕರಿಸಲಾಗುವುದು.

ಜಿಲ್ಲಾ ಅಧಿಕಾರಿ,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಚಿಕ್ಕಮಗಳೂರು.

## ಅನುಬಂಧ-2
## ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಅನುಷ್ಠಾನಗೊಳ್ಳುತ್ತಿರುವ ಕಾರ್ಯಕ್ರಮ ಗಳ ಆಯ್ಕೆ ಸಮಿತಿ ವಿವರಗಳು

| | | |
|---|---|---|
| **ನ್ಯಾಯಾಂಗ ಆಡಳಿತದಲ್ಲಿ ತರಭೇತಿಗೆ ಹಿಂದುಳಿದ ವರ್ಗಗಳ ಕಾನೂನು ಪದವೀಧರರ ಜಿಲ್ಲಾ ಮಟ್ಟದ ಆಯ್ಕೆ ಸಮಿತಿ ವಿವರ** | | |
| 1 | ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ, | ಅಧ್ಯಕ್ಷರು |
| 2 | ಬಾರ್ ಅಸೋಸಿಯೇಷನ್ ಅಧ್ಯಕ್ಷರು | ಸದಸ್ಯರು |
| 3 | ಜಿಲ್ಲಾ ಸರ್ಕಾರಿ ಅಭಿಯೋಜಕರು (ಜಿಲ್ಲಾ ಪಬ್ಲಿಕ್ ಪ್ರಾಸಿಕ್ಯೂಟರ್) | ಸದಸ್ಯರು |
| 4 | ಜಿಲ್ಲಾ ನ್ಯಾಯಿಕ ನೆರವು ಮಂಡಳಿಯ ಕಾರ್ಯದರ್ಶಿಗಳು | ಸದಸ್ಯರು |
| 5 | ಜಿಲ್ಲಾ ಸರ್ಕಾರಿ ವಕೀಲರು (ಪಬ್ಲಿಕ್ ಪ್ಲೀಡರ್) | ಸದಸ್ಯರು |
| 6 | ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳು | ಸದಸ್ಯ ಕಾರ್ಯದರ್ಶಿ |
| **ದೇವರಾಜು ಅರಸು ಭವನ ನಿರ್ಮಾಣದ ಜಿಲ್ಲಾ ಮಟ್ಟದ ಆಯ್ಕೆ ಸಮಿತಿ ವಿವರ**<br>ಸರ್ಕಾರದ ಆದೇಶ ಸಂಖ್ಯೆ; ಸಕಇ330./ಬಿಎಂಎಸ್2003 ಬೆಂಗಳೂರು ದಿನಾಂಕ: 04.09.2003 | | |
| 1 | ಜಿಲ್ಲಾಧಿಕಾರಿಗಳು | ಅಧ್ಯಕ್ಷರು |
| 2 | ಜಿಲ್ಲಾ ಅಧಿಕಾರಿಗಳು, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, | ಸದಸ್ಯ ಕಾರ್ಯದರ್ಶಿ |
| 3 | ಸಂಬಂಧಪಟ್ಟ ಜಿಲ್ಲಾ ಪಂಚಾಯಿತಿನಲ್ಲಿರುವ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು | ಸದಸ್ಯರು |
| 4 | ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ /ಉಪನಿರ್ದೇಶಕರು, ಕರ್ನಾಟಕ ಭೂ ಸೇನಾ ನಿಗಮ, ಪ್ರಾಜೆಕ್ಟ್ ಮ್ಯಾನೇಜರ್, ನಿರ್ಮಿತಿ ಕೇಂದ್ರ | ಸದಸ್ಯರು |
| 5 | ಹಿಂದುಳಿದ ವರ್ಗಗಳ ಸಂಘ / ಸಂಸ್ಥೆಗಳ ಒಬ್ಬ ಪ್ರತಿನಿಧಿ ( ಸರ್ಕಾರದಿಂದ ನೇಮಿಸಲ್ಪಟಡುವವರು) | ಅಧಿಕಾರೇತರ ಸದಸ್ಯರು |
| **ಬೆರಳಚ್ಚು ಮತ್ತು ಶೀಘ್ರಲಿಪಿ ತರಭೇತಿ ಅಭ್ಯರ್ಥಿಗಳ ಜಿಲ್ಲಾ ಮಟ್ಟದ ಆಯ್ಕೆ ಸಮಿತಿ** | | |
| 1 | ಜಿಲ್ಲಾ ಪಂಚಾಯಿತಿ ಉಪಕಾರ್ಯದರ್ಶಿಗಳು(ಆಡಳಿತ) | ಅಧ್ಯಕ್ಷರು |
| 2 | ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಅಥವಾ ಅವರ ಪರವಾಗಿ ಒಬ್ಬ ಸದಸ್ಯರು (ವಾಣಿಜ್ಯ) | ಸದಸ್ಯರು |
| 3 | ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಿಂದ ನಾಮಕರಣ ಮಾಡಲ್ಪಟ್ಟ ಜಿಲ್ಲೆಯ ಅಂಗೀಕೃತ ವಾಣಿಜ್ಯ ಸಂಸ್ಥೆಯ ಒಬ್ಬ ಪ್ರತಿನಿಧಿ | ಸದಸ್ಯರು |
| 4 | ಜಿಲ್ಲಾ ಅಧಿಕಾರಿಗಳು,ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | ಸದಸ್ಯ ಕಾರ್ಯದರ್ಶಿ |
| **ಹಿಂದುಳಿದ ವರ್ಗಗಳ ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆಗೆ ವಿದ್ಯಾರ್ಥಿಗಳ ಆಯ್ಕೆಗೆ ಜಿಲ್ಲಾ ಮಟ್ಟದ ಆಯ್ಕೆ ಸಮಿತಿ** | | |
| 1 | ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು , ಜಿಲ್ಲಾ ಪಂಚಾಯಿತಿ | ಅಧ್ಯಕ್ಷರು |
| 2 | ಜಿಲ್ಲಾ ಅಧಿಕಾರಿಗಳು,ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | ಸದಸ್ಯರು |
| 3 | ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ | ಸದಸ್ಯರು |
| 4 | ಜಿಲ್ಲಾ ಆರೋಗ್ಯ ಅಧಿಕಾರಿಗಳು | ಸದಸ್ಯರು |
| 5 | ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು | ಸದಸ್ಯರು |
| 6 | ಪ್ರಾಂಶುಪಾಲರು, ಜವಾಹರ್ ನವೋದಯ ವಸತಿ ಶಾಲೆ | ಸದಸ್ಯರು |
| 7 | ಸಂಬಂಧಪಟ್ಟ ವಸತಿ ಶಾಲೆಯ ಪ್ರಾಂಶುಪಾಲರು | ಸದಸ್ಯ ಕಾರ್ಯದರ್ಶಿ |

**ಹಿಂದುಳಿದ ವರ್ಗಗಳ ಇಲಾಖೆಯ ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ವಹಣೆ ಮೇಲ್ವಿಚಾರಣಾ ಜಿಲ್ಲಾ ಮಟ್ಟದ ಸಮಿತಿ**

(ಸರ್ಕಾರದ ಆದೇಶ ಸಂಖ್ಯೆ; ಸಕಇ106/ಬಿಎಂಎಸ್2004 ಬೆಂಗಳೂರು ದಿನಾಂಕ: 03.03.2005)

| | | |
|---|---|---|
| 1 | ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು , ಜಿಲ್ಲಾ ಪಂಚಾಯಿತಿ | ಅಧ್ಯಕ್ಷರು |
| 2 | ಉಪಕಾರ್ಯದರ್ಶಿ, (ಆಡಳಿತ) ಜಿಲ್ಲಾ ಪಂಚಾಯಿತಿ | ಸದಸ್ಯರು |
| 3 | ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ಪಂಚಾಯಿತಿ ಇಂಜಿನಿಯರಿಂಗ್ ವಿಭಾಗ | ಸದಸ್ಯರು |
| 4 | ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ | ಸದಸ್ಯರು |
| 5 | ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು | ಸದಸ್ಯರು |
| 6 | ಜಿಲ್ಲಾ ಅಧಿಕಾರಿಗಳು,ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | ಸದಸ್ಯ ಕಾರ್ಯದರ್ಶಿಗಳು |

**ಜಿಲ್ಲಾ ಮಟ್ಟದ ಜಾತಿ ಮತ್ತು ಆದಾಯ ಪರಿಶೀಲನಾ ಸಮಿತಿ ಸಿಂಧುತ್ವ ಪ್ರಮಾಣ ಪತ್ರ ನೀಡಿಕೆ**

| | | |
|---|---|---|
| 1 | ಜಿಲ್ಲಾಧಿಕಾರಿಗಳು | ಅಧ್ಯಕ್ಷರು |
| 2 | ಉಪಕಾರ್ಯದರ್ಶಿ, (ಆಡಳಿತ) ಜಿಲ್ಲಾ ಪಂಚಾಯಿತಿ | ಸದಸ್ಯರು |
| 3 | ಆಯಾಯಾ ತಾಲ್ಲೂಕಿನ ತಹಶೀಲ್ದಾರ್ | ಸದಸ್ಯರು |
| 4 | ಜಿಲ್ಲಾ ಅಧಿಕಾರಿಗಳು,ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಅಲ್ಪಸಂಖ್ಯಾತರ ಇಲಾಖೆ | ಸದಸ್ಯ ಕಾರ್ಯದರ್ಶಿಗಳು |

**ಮೆಟ್ರಿಕ್ ಪೂರ್ವ / ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು / ಖಾಸಗಿ ಅನುದಾನಿತ ವಿದ್ಯಾರ್ಥಿ ನಿಲಯಗಳಿಗೆ ವಿದ್ಯಾರ್ಥಿಗಳ ತಾಲ್ಲೂಕು ಮಟ್ಟದ ಆಯ್ಕೆ ಸಮಿತಿ.**

( ಸರ್ಕಾರದ ಆದೇಶ ಸಂಖ್ಯೆ; ಸಕಇ221/ಬಿಎಂಎಸ್2009ಬೆಂಗಳೂರು ದಿನಾಂಕ: 24.07.2009)

| | | |
|---|---|---|
| 1 | ತಾಲ್ಲೂಕಿನ ಹೆಚ್ಚಿನ ಭಾಗ ಪ್ರತಿನಿಧಿಸುವ ವಿಧಾನ ಸಭಾ ಸದಸ್ಯರು | ಅಧ್ಯಕ್ಷರು |
| 2 | ತಾಲ್ಲೂಕಿನ ಉಳಿದ ಭಾಗ ಪ್ರತಿನಿಧಿಸುವ ವಿಧಾನ ಸಭಾ ಸದಸ್ಯರು | ಸದಸ್ಯರು |
| 3 | ಆಯಾ ಕ್ಷೇತ್ರದ ವಿಧಾನ ಪರಿಷತ್ತಿನ ಸದಸ್ಯರು | ಸದಸ್ಯರು |
| 4 | ಕಾರ್ಯ ನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ | ಸದಸ್ಯರು |
| 5 | ಕ್ಷೇತ್ರ ಶಿಕ್ಷಣಾಧಿಕಾರಿಗಳು | ಸದಸ್ಯರು |
| 6 | ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರರು | ಸದಸ್ಯರು |
| 7 | ಆಯಾ ತಾಲ್ಲೂಕಿನ ಸ್ಥಳೀಯ ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಗಳು | ಸದಸ್ಯರು |
| 8 | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಆಯಾಯಾ ತಾಲ್ಲೂಕಿನ ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳು | ಸದಸ್ಯ ಕಾರ್ಯದರ್ಶಿಗಳು |

**ಆಶ್ರಮಶಾಲೆಗಳಿಗೆ ತಾಲ್ಲೂಕು ಮಟ್ಟದ ಆಯ್ಕೆ ಸಮಿತಿ**

| | | |
|---|---|---|
| 1 | ತಾಲ್ಲೂಕಿನ ಹೆಚ್ಚಿನ ಭಾಗ ಪ್ರತಿನಿಧಿಸುವ ವಿಧಾನ ಸಭಾ ಸದಸ್ಯರು | ಅಧ್ಯಕ್ಷರು |
| 2 | ತಾಲ್ಲೂಕಿನ ಉಳಿದ ಭಾಗ ಪ್ರತಿನಿಧಿಸುವ ವಿಧಾನ ಸಭಾ ಸದಸ್ಯರು | ಸದಸ್ಯರು |
| 3 | ಆಯಾ ಕ್ಷೇತ್ರದ ವಿಧಾನ ಪರಿಷತ್ತಿನ ಸದಸ್ಯರು | ಸದಸ್ಯರು |
| 4 | ಕಾರ್ಯ ನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ | ಸದಸ್ಯರು |
| 5 | ಕ್ಷೇತ್ರ ಶಿಕ್ಷಣಾಧಿಕಾರಿಗಳು | ಸದಸ್ಯರು |
| 6 | ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರರು | ಸದಸ್ಯರು |
| 7 | ಆಯಾ ತಾಲ್ಲೂಕಿನ ಸ್ಥಳೀಯ ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಗಳು | ಸದಸ್ಯರು |
| 8 | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಆಯಾಯಾ ತಾಲ್ಲೂಕಿನ ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳು | ಸದಸ್ಯ ಕಾರ್ಯದರ್ಶಿಗಳು |

| ಹೊಲಿಗೆ ತರಬೇತಿ ಕೇಂದ್ರಗಳಿಗೆ ಅಭ್ಯರ್ಥಿಗಳ ತಾಲ್ಲೂಕು ಮಟ್ಟದ ಆಯ್ಕೆ ಸಮಿತಿ | | |
|---|---|---|
| 1 | ಕಾರ್ಯ ನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ | ಅಧ್ಯಕ್ಷರು |
| 2 | ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್ | ಸದಸ್ಯರು |
| 3 | ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿರವರಿಂದ ನೇಮಕ ಮಾಡಲ್ಪಟ್ಟ ಅಧಿಕಾರೇತರ ಒಬ್ಬ ಸದಸ್ಯರು ಸೇರಿದಂತೆ, ಇಬ್ಬರು ಸದಸ್ಯರು | ಸದಸ್ಯರು |
| 4 | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಆಯಾಯಾ ತಾಲ್ಲೂಕಿನ ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳು | ಸದಸ್ಯ ಕಾರ್ಯದರ್ಶಿಗಳು |

| ಇಲಾಖೆಯ ವಿದ್ಯಾರ್ಥಿ ನಿಲಯಗಳ ಸಮರ್ಪಕ ಹಾಗೂ ಪರಿಣಾಮಕಾರಿ ನಿರ್ವಹಣೆಗೆ ತಾಲ್ಲೂಕು ಮಟ್ಟದ ಸಂದರ್ಶಕ ಸಮಿತಿ<br>(ಸರ್ಕಾರದ ಆದೇಶ ಸಂಖ್ಯೆ; ಸಕಇ25/ಪಕವಿ2001 ಬೆಂಗಳೂರು ದಿನಾಂಕ: 22.06.2001) | | |
|---|---|---|
| 1 | ತಾಲ್ಲೂಕಿನ ಹೆಚ್ಚಿನ ಪ್ರದೇಶವನ್ನು ಪ್ರತಿನಿಧಿಸುವ ಶಾಸಕರು | ಅಧ್ಯಕ್ಷರು |
| 2 | ತಾಲ್ಲೂಕಿನಲ್ಲಿರುವ ಇತರೆ ಶಾಸಕರು | ಸದಸ್ಯರು |
| 3 | ತಾಲ್ಲೂಕಿನಲ್ಲಿ ಖಾಯಂ ಆಗಿ ವಾಸವಾಗಿರುವ ವಿಧಾನ ಪರಿಷತ್ತಿನ ಸದಸ್ಯರು | ಸದಸ್ಯರು |
| 4 | ತಾಲ್ಲೂಕು ಪಂಚಾಯಿತಿ ಸಮಿತಿಯ ಅಧ್ಯಕ್ಷರು | ಸದಸ್ಯರು |
| 5 | ತಾಲ್ಲೂಕಿನ ತಹಶೀಲ್ದಾರರು | ಸದಸ್ಯರು |
| 6 | ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು | ಸದಸ್ಯರು |
| 7 | ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು | ಸದಸ್ಯರು |
| 8 | ಜಿಲ್ಲಾ ಅಧಿಕಾರಿಗಳು,ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | ಸದಸ್ಯರು |
| 9 | ತಾಲ್ಲೂಕು ಸರ್ಕಾರಿ ಆಸ್ಪತ್ರೆ ವೈದ್ಯಾಧಿಕಾರಿಗಳು | ಸದಸ್ಯರು |
| 10 | ಪುರಸಭೆ ಅಧ್ಯಕ್ಷರು / ಸ್ಥಳೀಯ ಮಂಡಲ್ ಪ್ರಧಾನರು | ಸದಸ್ಯರು |
| 11 | ತಾಲ್ಲೂಕಿನ ಎಲ್ಲಾ ಸ್ಥಳೀಯ ಪಂಚಾಯಿತಿಗಳ ಸದಸ್ಯರು | ಸದಸ್ಯರು |
| 12 | ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿಗಳು | ಸದಸ್ಯ ಕಾರ್ಯದರ್ಶಿಗಳು |

ಜಿಲ್ಲಾ ಅಧಿಕಾರಿ,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಚಿಕ್ಕಮಗಳೂರು.